**ದಿನಾಂಕಃ 23.10.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಕೆ ಎನ್ ಆರ್., ಪ್ರತಿವಾದಿ ಪರ ವಕೀಲರಿಂದ**

8. ನಾನು 14 ಲಕ್ಷ ರೂಪಾಯಿಗಳನ್ನು ಸೈಯದ್ ಕಾಸಿಪ್ವುಲ್ಲಾ ರವರಿಗೆ ಕ್ರಯದ ಕರಾರಿನ ವಿಚಾರವಾಗಿ ಆರ್ ಟಿ ಜಿ ಎಸ್ ಮಾಡಿರುತ್ತೇನೆ. ನಾನು ಬ್ಯಾಂಕಿನಿಂದ ಹಣ ತೆಗೆದಿರುವ ಕುರಿತು ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಕುರ್ಷಿದ್ ಪಾತೀಮಾ ರವರಿಗೆ ವ್ಯಾಜ್ಯದ ಜಮೀನು ಅವರ ತಾತನ ಕಡೆಯಿಂದ ಬಂದಿರುತ್ತದೆ. ಅವರ ತಾತನ ಹೆಸರು ಹೇಳಲು ಈಗ ನೆನಪು ಬರುತ್ತಿಲ್ಲ. ನನಗೆ ಕುರ್ಷಿದ್ ಪಾತೀಮಾ ರವರ ಕುಟುಂಬದ ಕುರಿತು ಮಾಹಿತಿ ಇಲ್ಲದೇ ಇದ್ದರೂ ಕೂಡ ನಿಪಿ–1 ರ ಕ್ರಯದ ಕರಾರು ಪತ್ರದಲ್ಲಿ ಅವರ ತಂದೆಯಾದ ಸೈಯದ್ ರಹಮತ್ ವುಲ್ಲಾ ರವರಿಂದ ಬಂದಿರುತ್ತದೆ ಎಂದು ಸುಳ್ಳು ಹೇಳಿ ಬರೆಸಿರುತ್ತೇನೆಂದರೆ ಸರಿಯಲ್ಲ.

9. ನಿಪಿ–1 ರ ಕ್ರಯದ ಕರಾರು ಪತ್ರವನ್ನು ನೊಂದಣಿ ಮಾಡಿಸಲು ಹೋದಾಗ ಎಷ್ಟು ಸಮಯವಾಗಿತ್ತು ಎಂದು ಹೇಳಲು ನೆನಪಿರುವುದಿಲ್ಲ. ನಾನು ಎಕ್ಸ್ಪೋರ್ಟ್/ನಿರ್ಯಾತ ವ್ಯಾಪಾರ ಮಾಡುತ್ತೇನೆ. ನನಗೆ ಸೇರಿದ 1 ಎಕರೆ ವ್ಯವಸಾಯದ ಜಮೀನು ಇರುತ್ತದೆ. ನನ್ನ ತಂದೆ ಸೈಯದ್ ಮುನೀರ್ ರವರ ಹೆಸರಿನಲ್ಲಿ ಸುಮಾರು 3–4 ಎಕರೆ ಜಮೀನು ಇರುತ್ತದೆ. ನಾನು ಹಾಗೂ ನನ್ನ ತಂದೆ ಇಬ್ಬರೂ ರಿಯಲ್ ಎಸ್ಟೇಟ್ ವ್ಯಾಪಾರ ಮಾಡುತ್ತೇವೆ ಎಂದರೆ ಸರಿ.

10. ಪ್ರತಿವಾದಿ ಕುರ್ಷಿದ್ ಪಾತೀಮಾ ರವರ ಗಂಡನ ತಂದೆ ಅಂದರೆ ಅವರ ಮಾವ ಸೈಯದ್ ಇನಾಯತ್ ವುಲ್ಲಾ ಮತ್ತು ನನ್ನ ತಂದೆ ನಡುವೆ ಸುಮಾರು ವರ್ಷಗಳಿಂದ ಪರಿಚಯವಿರುತ್ತದೆ. ಸೈಯದ್ ಇನಾಯತ್ ವುಲ್ಲಾ ಏಷಿಯನ್ ಪೇಂಟ್ಸ್ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ಸೈಯದ್ ಇನಾಯತ್ ವುಲ್ಲಾ ರವರು ನನಗೆ ಸೇರಿದ ಯಲಹಂಕದಲ್ಲಿರುವ ನಿವೇಶನದಲ್ಲಿ ಪೇಂಟ್ ಅಂಗಡಿ ಇಟ್ಟುಕೊಳ್ಳಲು ಜಾಗವನ್ನು ಬಾಡಿಗೆಗೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಅಂಗಡಿ ಜಾಗಕ್ಕೆ 5 ಲಕ್ಷ ಮುಂಗಡ ಪಡೆದು 70 ಸಾವಿರ ಬಾಡಿಗೆ ನಿಗದಿಪಡಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ಪೇಂಟ್ ವ್ಯಾಪಾರದಲ್ಲಿ

ನಾನು ಕೂಡ ಪಾಲುದಾರಿಕೆ ಹೊಂದಿರುತ್ತೇನೆಂದರೆ ಸರಿಯಲ್ಲ. ನನ್ನ ಪಾಲುದಾರಿಕೆ ಸಲುವಾಗಿ ನಾನು 15 ಲಕ್ಷ ರೂಪಾಯಿಗಳನ್ನು ಸೈಯದ್ ಇನಾಯತ್ ವುಲ್ಲಾ ರವರ ಮಗನಾದ ಸೈಯದ್ ಕಾಸೀಪ್ ವುಲ್ಲಾ ರವರಿಗೆ ಆರ್ ಟಿ ಜಿ ಎಸ್ ಮಾಡಿರುತ್ತೇನೆಂದರೆ ಸರಿಯಲ್ಲ. ಪೇಂಟ್ ವ್ಯವಹಾರದಲ್ಲಿ ನಷ್ಟ ಉಂಟಾಗಿ ನನ್ನ ಪಾಲುದಾರಿಕೆಯ 15 ಲಕ್ಷ ರೂಪಾಯಿಗಳನ್ನು ಮರಳಿ ಕೊಡಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ಹಣ ಭದ್ರತೆಗಾಗಿ ಒಂದು ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೆನೆಂದರೆ ಸರಿಯಲ್ಲ. ನಾನು ಹೇಳುವಂತೆ ನಿಪಿ-1 ರ ಕ್ರಯದ ಕರಾರು ಪತ್ರವನ್ನು ಪ್ರತಿವಾದಿಯೂ ನನಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಖಾತೆ ಮಾಡಿಸಿಕೊಡುತ್ತೇನೆಂದು ಹೇಳಿ ನಿಪಿ-1 ರ ಕ್ರಯದ ಕರಾರು ಪತ್ರವನ್ನು ಮರೆಮಾಚಿ ಸೃಷ್ಟಿ ಮಾಡಿಕೊಂಡಿದ್ದೆನೆಂದರೆ ಸರಿಯಲ್ಲ. ಪ್ರತಿವಾದಿಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

11. ಪ್ರತಿವಾದಿಯೂ ವಾದ ಪತ್ರದಲ್ಲಿ ನಮೂದಿಸಿರುವ ವಿಳಾಸದಲ್ಲಿ ವಾಸವಿಲ್ಲ ಎಂದರೆ ಸಾಕ್ಷಿಯೂ ಅವರು ಸುಮಾರು ಬಾರಿ ವಿಳಾಸಗಳನ್ನು ಬದಲಾಯಿಸುತ್ತಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನೀಡಿರುವ ಪ್ರತ್ಯುತ್ತರ ನೋಟಿಸಿನಲ್ಲಿ ನಮೂದು ಇರುವ ವಿಳಾಸದಲ್ಲಿ ಪ್ರತಿವಾದಿ ವಾಸ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಅವರಿಗೆ ಪ್ರತ್ಯುತ್ತರ ಜಾರಿಯಾಗಿಲ್ಲ ಎಂದರೆ ಸರಿಯಲ್ಲ.

12. ದಿ. 11.07.2021 ರಂದು ನನ್ನ ಹಾಗೂ ನನ್ನ ತಂದೆಯ ವಿರುದ್ಧ ಪ್ರತಿವಾದಿಯೂ ಕೆ ಜಿ ಹಳ್ಳಿ ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರ ಕ್ರಯದ ಕರಾರು ಪತ್ರಕ್ಕೆ ಹಾಗೂ ಪ್ರತಿವಾದಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.